

# ಗೌರಿ ಹೂವಿನ ಸೊಬಗು

■ ಚಿತ್ರ-ಲೇಖನ: **ಪುಟ್ಟರಾಜು ಕೈಗಾ**

**ಪ**ಶ್ಚಿಮ ಘಟ್ಟದ ತವರಾದ ಉತ್ತರ ಕನ್ನಡದಲ್ಲಿ ಸರಿಸುಮಾರು ಎರಡು ಸಾವಿರಕ್ಕೂ ಹೆಚ್ಚಿನ ಸಸ್ಯ ಪ್ರಬೇಧಗಳಿವೆ. ನಮ್ಮಲ್ಲಿರುವ ಅನೇಕ ಸಾಹಸಮಯ ಪ್ರಕೃತಿಯ ತಾಣವಾಗಲಿ, ಜಲಪಾತವಾಗಲಿ, ಪಕ್ಷಿ, ಪ್ರಾಣಿ, ಕೀಟ, ಸಸ್ಯವಾಗಲಿ ಎಲ್ಲವನ್ನೂ ಶಿಸ್ತುಬದ್ಧವಾಗಿ ವರ್ಗೀಕರಿಸಿ ದಾಖಲಿಸಿದವರು ಬಹುಶಃ ವಿದೇಶಿಯರು ಮಾತ್ರ ಎನ್ನಬಹುದು. ಹಾಗಾಗಿಯೇ ಆ ಸ್ಥಳಗಳು ಮತ್ತು ಸಸ್ಯಗಳಿಗೆ ಅವರ ಹೆಸರೂ ತಳುಕು ಹಾಕಿಕೊಂಡಿದೆ. ಅಂತಹದ್ದೇ ಒಂದು ಸುಂದರ ಹೂವು– ಗೌರಿ ಹೂವು! ಅಲ್ಲಿ ಹೂವುಗಳ ಜಾತಿಗೆ ಸೇರಿದ ಗ್ಲೋರಿ ಲಿಲ್ಲಿ 'ಲಿಲಿಯೇಸಿ' ಸಸ್ಯ ಕುಟುಂಬಕ್ಕೆ ಗೌರಿ ಹೂವು ಸೇರಿದೆ. ಕಮಲದ ನೈದಿಲೆಯ ಕುಟುಂಬಕ್ಕೆ ಸೇರಿದ್ದರೂ ಆಶ್ಚರ್ಯಕರವೆಂಬಂತೆ ಇದೊಂದು ಬಳ್ಳಿಯಾಗಿ ಹಬ್ಬುವ ಹೂವು ಎಂಬುದು 'ಗೌರಮ್ಮ'ನ ಹೆಗ್ಗಳಿಕೆ.

ಕೊಬ್ಬಿದ ಕೋಳಿ ಹುಂಜದ ತಲೆಯ ಮೇಲಿರುವ ಕಿರೀಟದಂತಹ ಕೆಂಪಂಚು ಗಾಳಿ ಬೀಸಿದಾಗಲೆಲ್ಲಾ ಕುಣಿಯುತ್ತದೆ. ಚೂಪಾದ ಹಸಿರ ಎಲೆಗಳ ಹಿನ್ನೆಲೆಯಲ್ಲಿ ಅರಳುವ ಈ ವರ್ಣರಂಜಿತ ಹೂವು ಪ್ರಕೃತಿಯ ಹೆಮ್ಮೆಯ ಸೃಷ್ಟಿ. ಸ್ಥಳೀಯವಾಗಿ ಕೋಳಿ ಹುಂಜದ ಹೂ. ಗೆಡ್ಡೆಯನ್ನು ಹೊಂದಿರುವುದರಿಂದ ಕೋಳಿ ಕುಟುವನ ಗೆಡ್ಡೆ! ಕೈಗಾದ ಸುತ್ತಮುತ್ತಲ ಹಾಲಕ್ಕಿ ಒಕ್ಕಲಿಗರು 'ಕೋಳಿ ಕಾಕನ ಗೆಡ್ಡೆ' ಎಂದು ಪ್ರೀತಿಯಿಂದ ಕರೆಯುತ್ತಾರೆ. ಹೀಗೆ ಹತ್ತಾರು ಹೆಸರು. ಅಂಕೋಲಾ, ಕುಮಟಾ, ಹೊನ್ನಾವರ, ಯಲ್ಲಾಪುರ, ಶಿರಸಿ, ಸಿದ್ದಾಪುರ, ಸಾಗರದ ಹವ್ಯಕರಿಗೆಲ್ಲ ಇದು ಗೌರಿ ಹೂವೇ. ಗೌರಿ ಹೂವು ವರುಷದಲ್ಲಿ ಒಮ್ಮೆ ಅಂದರೆ, ಸರಿಯಾಗಿ ಶ್ರಾವಣ ಮತ್ತು ಭಾದ್ರಪದ ಮಾಸದಲ್ಲಿ ಅರಳುತ್ತದೆ.

ಗೌರಿ ಹೂವಿನ ಮೊಗ್ಗು ಹಸಿರು ಬಣ್ಣದ್ದು. ಅರೆ ಬರೆ ಬಿರಿದ ಮೊಗ್ಗು ಹೂವಾಗುವವರೆಗೂ ನಡೆಯುವ ಬಣ್ಣಗಳ ಬದಲಾವಣೆ ನಿಜಕ್ಕೂ ವಿಸ್ಮಯಕಾರಿ. ಗೌರಮ್ಮನಂತೆ ನಾಚಿಕೆಯಿಂದ ಕೆಳಕ್ಕೆ, ಅಂದರೆ ಭೂಮಿಯ ಕಡೆ ತಲೆ ಬಾಗಿಸಿರುತ್ತದೆ. ಮೊಗ್ಗು ಅರಳಲು ಪ್ರಾರಂಭವಾದಂತೆ ದಳಗಳು ಅರ್ಧ ಹಸಿರು ಮಿಶ್ರಿತ ಹಳದಿ ಮತ್ತು ಕೆಂಪು ಬಣ್ಣಕ್ಕೆ ಪರಿವರ್ತನೆ ಹೊಂದುತ್ತವೆ. ಪೂರ್ತಿ ಅರಳಲು ಅಣಿಯಾಗುತ್ತಿದ್ದಂತೆ. ಆಗಸದ ಕಡೆಗೆ ಮುಖ ಮಾಡುತ್ತವೆ.

– 8ನೇ ಪುಟ ನೋಡಿ

